# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 1630/2022

ಪ್ರಾಸಾ-5, ಚಾಸಾ-16

ಸಾಕ್ಷಿದಾರರ ಹೆಸರು : ಕಿರಣ್ ಕುಮಾರ್

ತಂದೆಯ ಹೆಸರು : ಸಿ.ಎಂ. ಮಾದಯ್ಯ

ವಯಸ್ಸು : 47 ವರ್ಷ

ಉದ್ಯೋಗ : ಸಹಾಯಕ ನಿರ್ದೇಶಕರು, ಅಗ್ನಿ ಅಸ್ತ್ರ ವಿಭಾಗ

ವಾಸ : ಬೆಂಗಳೂರು

ಸಾಕ್ಷಿಗೆ ದಿನಾಂಕಃ 25.07.2025ರಂದು ವಿ.ಸಿ ಮುಖಾಂತರ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಸುಮಾರು 21 ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ, ಪ್ರಸ್ತುತ ಸಹಾಯಕ ನಿರ್ದೇಶಕ ಅಗ್ನಿ ಅಸ್ತ್ರ ವಿಭಾಗ, ನ್ಯಾಯ ವಿಜ್ಞಾನ ಪ್ರಯೋಗಾಲಯ ಬೆಂಗಳೂರು ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ 11.03.2019ರಂದು ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಃ 49/19 ಕ್ಕೆ ಸಂಬಂಧಿಸಿದ 6 ಸೀಲ್ ಆದ ವಸ್ತುಗಳನ್ನು ಪರೀಕ್ಷೆಗಾಗಿ ಚಾಸಾ-10ರವರು ತಂದು ಹಾಜರು ಪಡಿಸಿದ ಮೇರೆಗೆ ಅವುಗಳನ್ನು ಸ್ವೀಕರಿಸಿ ಪರೀಕ್ಷಿಸಿ ವರದಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಬಂದೂಕುನನ್ನು ನೋಡಿ ಗುರುತಿಸಿರುತ್ತಾರೆ. FSL ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಮಾದರಿ ಮೊಹರನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. FSL ವರದಿಯಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತೇನೆ.

1. ವಸ್ತು ಸಂಖ್ಯೆ-1 ರಲ್ಲಿರುವ ಅಸ್ತ್ರವು ಅಗ್ನಿ ಅಸ್ತ್ರವಾಗಿರುತ್ತದೆ.

2.ವಸ್ತು ಸಂಖ್ಯೆ:-1ರಲ್ಲಿರುವ SBML ಬಂದೂಕು ಅನಧೀಕೃತವಾಗಿ ತಯಾರಿಸಿರುವ ಬಂದೂಕುವಾಗಿರುತ್ತದೆ.

3. ವಸ್ತು ಸಂಖ್ಯೆ:-1ರಲ್ಲಿರುವ SBML ಬಂದೂಕು ಇತ್ತೀಚೆಗೆ ಫೈಯರಾದ ನಿಶಾನೆಯನ್ನು ಹೊಂದಿರುತ್ತದೆ ಆದರೆ ನಿಖರವಾದ ಸಮಯ ಮತ್ತು ದಿನಾಂಕ ಹೇಳಲು ಬರುವುದಿಲ್ಲ.

4. ವಸ್ತು ಸಂಖ್ಯೆ:-1ರಲ್ಲಿರುವ SBML ಬಂದೂಕು ಪರೀಕ್ಷೆಯ ಸಮಯದಲ್ಲಿ ಚಲನಾ ಸ್ಥಿತಿಯಲ್ಲಿರುತ್ತದೆ.

5. ವಸ್ತು ಸಂಖ್ಯೆ:-1ರಲ್ಲಿರುವ SBML ಬಂದೂಕಿನ ಪರಿಣಾಮಕಾರ ವ್ಯಾಪ್ತಿ 40 ಗಜ ಇರುತ್ತದೆ.

6. ವಸ್ತು ಸಂಖ್ಯೆ:-2 ರಿಂದ 6ಗಳನ್ನು ಬಳಸಿ ವಸ್ತು ಸಂಖ್ಯೆ:1 SBML ಬಂದೂಕಿನಿಂದ ಫೈಯರ್ ಮಾಡಬಹುದಾಗಿರುತ್ತದೆ. ಸಾಕ್ಷಿಯು  ವಸ್ತು ಸಂಖ್ಯೆ 2 ರಿಂದ 6ಅನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ  ಮುದ್ದೆಮಾಲುಗಳಾಗಿ ಗುರುತಿಸಲಾಗಿರುತ್ತದೆ.

**ಪಾಟೀಸವಾಲು:ಶ್ರೀ ಎ.ಎಸ್.ಎಸ್. ಆರ್  ವಕೀಲರಿಂದ:**

ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

**ಮರು ವಿಚಾರಣೆ:** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.

## ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

**ಸಿ.ಸಿಃ 1630/2022**

ಫ್ರಾಸಾ–6, ಚಾಸಾ–4

| | | |
|---|---|---|
| ಸಾಕ್ಷಿದಾರರ ಹೆಸರು | : | ಗುರುಮಲ್ಲಪ್ಪ |
| ತಂದೆಯ ಹೆಸರು | : | ಲೇಟ್ ಬಸಪ್ಪ |
| ವಯಸ್ಸು | : | 64ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಅರಳೀಕಟ್ಟೆ ಗ್ರಾಮ |

ಸಾಕ್ಷಿಗೆ ದಿನಾಂಕಃ 25.07.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತಿಲ್ಲ. ಸುಮಾರು ಐದುವರೇ ವರ್ಷಗಳ ಹಿಂದೆ ಪೊಲೀಸರು ನಮ್ಮ ಊರಿಗೆ ಬಂದಿದ್ದಾಗ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಈಗಾಗಲೇ ಗುರುತಿಸಲ್ಪಟ್ಟ ನಿಪಿ–3 ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–3(ಬಿ)ಎಂದು ಗುರುತಿಸಲಾಯಿತು. ನಿಪಿ–3ರಲ್ಲಿ ಏನು ಬರೆದಿದೆ ಗೊತ್ತಿಲ್ಲ.

(ಮಾನ್ಯ ಎಪಿಪಿರವರರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕಃ 21.02.2020 ರಂದು ಅರಳೀಕಟ್ಟೆ ಗ್ರಾಮದ ಬಸ್ ನಿಲ್ದಾಣದ ಮುಂಭಾಗ ಮುಖ್ಯಪೇದೆ ನವೀನ್ ಕುಮಾರ್ ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪೋಲಿಸರು ನನ್ನ ಹಾಗೂ ಚಾಸಾ–5ರವರ ಸಮಕ್ಷಮ ಮಃ 12 ರಿಂದ 1 ಗಂಟೆಯವರೆಗೆ ನಿಪಿ–3ರಂತೆ ಸ್ಥಳ ಪಂಚನಾಮೆ ಜರುಗಿಸಿದಾಗ ಸಹಿ ಮಾಡಿರುತ್ತೇನೆ

ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.